# ಕುಂಚ ಪ್ರಪಂಚ





ನಿಯತಿ ನಾವಡ
6ನೇ ತರಗತಿ, ಶ್ರೀ ಸಿದ್ಧಿವಿನಾಯಕ ವಸತಿ ಶಾಲೆ, ಕುಂದಾಪುರ



ಸೃಷ್ಟಿ
8ನೇ ತರಗತಿ, ವಿಜಯ ವಿಠಲ ವಿದ್ಯಾಶಾಲಾ ಮೈಸೂರು



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ: editorsu@sudha.co.in**

# ಮೀನಿನ ಬೇಟೆ

■ **ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ**

ಕಲೆ: ಸಂತೋಷ್ ಸಸಿಹಿತ್ಲು



ನಮ್ಮೂರ ಕೆರೆಗಳು ಒಣಗಿವೆ ಈಗ
ಮೀನಿನ ಬೇಟೆಗೆ ಸರಿಸಮಯ ಬೇಗ
ಕೂಣಿ, ಜರಡಿ ಸಣ್ಣವರಿಗೆ
ಬಲೆ ಏನಿದ್ರೂ ದೊಡ್ಡವರಿಗೆ

ಕೆರೆಯಂಗಳ ತುಂಬಾ
ಜನವೋ ಜನ
ಉತ್ಸಾಹ ಮೀರಿದೆ
ಮೈಮರೆತಿದೆ ಮನ

ಬಲೆಗೆ ಬಿದ್ದರೆ ದೊಡ್ಡ ಮೀನು
ಕೂಗಿ ಕರೆವೆ ಎಲ್ಲರ ನಾನು
ಅಮ್ಮನದಂತೂ ಸಡಗರದ ಓಡಾಟ
ನಂಬಿರುವಳು ಬರುವ ಮೀನಿನ ಗುಂಟ

ಸಂತೆ ಮುಗಿದಿದೆ
ಸಾಮಾನು ತುಂಬಿದೆ ಮನೆಯಲ್ಲಿ
ಮೀನಿನ ಸಾರಿಗೆ
ಮಸಾಲೆ ಅರೆವರು ಖುಶಿಯಲ್ಲಿ

ನಾನಾ ರೀತಿಯ ಮೀನುಗಳುಂಟು
ರುಚಿಯಂತೂ ಮೀರಿಸುವುದುಂಟು
ಚೇಳಿ, ಕೊರವಿ, ಹಾವ್ಲ, ಬಾಳೆ
ಕುಚ್ಚು, ಗಿಂಡಿ, ಗೌರಿ, ಗೊಜಳೆ

ಕೆಸರಲಿ ಹೂತಿರೊ, ನೀರಲಿ
ಅಡಗಿರೊ ಮೀನುಗಳು
ಜೊಂಡಲಿ ಕೂತಿರೊ, ಮೇಲಕ್ಕಾರಿ
ಜಾರುವ ಮೀನುಗಳು
ತಪ್ಪಿಸಿಕೊಂಡು ಓಡಿದರೂ
ಬಿಡದೆ ಬೆನ್ನತ್ತುವೆವು ನಾವೂನೂ

ವರುಷಕ್ಕೊಮ್ಮೆ ಮೀನಿನ ಬೇಟೆ
ಮರೆತೆ ಬಿಡುವೆವು ಶಾಲೆ ಪ್ಯಾಟೆ
ಸಂತಸ ತುಂಬಿದೆ ಇಲ್ಲೆಲ್ಲಾ
ಪ್ರಕೃತಿಯ ಮಕ್ಕಳು ನಾವೆಲ್ಲಾ ■